1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 08

CW- 10

ಪ್ರ. ಬೋ. ದಿನಾಂಕಃ 12-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ನಿಜಲಿಂಗಪ್ಪ ಕೋಡಿಹಳ್ಳಿ |
| ತಂದೆ/ಗಂಡನ ಹೆಸರು | : | ಭರಮಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಸಹಾಯಕ ಅಭಿಯಂತರರು , ಕಾಡ ಉಪ ವಿಭಾಗ, ದಾವಣಗೆರೆ |
| ವಾಸ | : | ದಾವಣಗೆರೆ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನಾನು ದಿ.01-07-2020 ರಿಂದ 26-07-2021 ರ ವರೆಗೆ ದಾವಣಗೆರೆ ಪಿಡಬ್ಲೂಡಿ ಯಲ್ಲಿ ಸಹಾಯಕ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.21-06-2021 ರಂದು ದಾವಣಗೆರೆ ಹದಡಿ ಪೊಲೀಸ್ ಠಾಣೆಯಿಂದ ಈ ಪ್ರಕರಣದ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಲು ಕೋರಿದ್ದು ಅದರಂತೆ ದಿ.13-07-2021 ರಂದು ಹದಡಿ ಪೊಲೀಸ್ ಠಾಣಾ ಪೇದೆ ಅಣ್ಣಪ್ಪ ರವರು ನನ್ನನ್ನು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ, ಸ್ಥಳ ತೋರಿಸಿದ್ದು ಅದರಂತೆ ನಾನು ನಕಾಶೆ ತಯಾರಿಸಿ ಕೊಟ್ಟಿರುತ್ತೇನೆ.

ನಾನು ತಯಾರಿಸಿ ನೀಡಿದ ನಾಕಾಶೆಯನ್ನು ನೋಡುತ್ತಿದ್ದು , ಅದನ್ನು ನಿಪಿ.10 ಎಂದು , ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ನನಗೆ ನೀಡಿದ ಮನವಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ನಕಾಶೆ ತಯಾರಿಸಿ ನೀಡಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.183/2022</u>

PW- 07

CW- 13

ಪ್ರ. ಬೋ. ದಿನಾಂಕಃ 28-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಕಮಲಮ್ಮ |
| ತಂದೆ/ಗಂಡನ ಹೆಸರು | : | ಓಬಳೇಶಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಶಾಘಲೆ ಗ್ರಾಮ, ದಾವಣಗೆರೆ ತಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತರು ನನಗೆ ಗೊತ್ತು. ಚಾಸಾ-1 ನನಗೆ ಗೊತ್ತು. ಮೃತ ಗೌರಮ್ಮ 1 ನೇ ಆರೋಪಿ ದೇವೇಂದ್ರಪ್ಪನ ಹೆಂಡತಿ. ಮೃತ ಗೌರಮ್ಮ 1 ನೇ ಆರೋಪಿಯ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ. 1 ನೇ ಆರೋಪಿ ನನ್ನ ಅಣ್ಣ . ಮೃತ ಗೌರಮ್ಮ ನನ್ನ ಅಣ್ಣನ ಹೆಂಡತಿ.

ಮೃತ ಗೌರಮ್ಮ ಯಾವ ಕಾರಣಕ್ಕೆ ನೇಣುಹಾಕಿಕೊಂಡಳು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಮತ್ತು ಗೌರಮ್ಮಳ ಮಗಳು ಕವಿತಾಳು ಹಣ ಮತ್ತು ಆಸ್ತಿ ಕೇಳಿ ಗಲಾಟೆ ಮಾಡುತ್ತಿದ್ದಳು. ತಾಯಿ ಮಗಳ ಜಗಳ ಎಂದು ನಾವು ಸುಮ್ಮನಿರುತ್ತಿದ್ದೇವು. ಆರೋಪಿತರ ಪ್ರಚೋದನೆಯಿಂದ ಗೌರಮ್ಮ ನೇಣುಹಾಕಿಕೊಂಡಿದ್ದಾಳೆ ನಾನು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

1 ನೇ ಆರೋಪಿಯ ಮನೆಯಲ್ಲಿ ಆರೋಪಿತರಿಗೂ ಮತ್ತು ಮೃತ ಗೌರಮ್ಮರಿಗೆ ಗಲಾಟೆಯಾಗುತ್ತಿತ್ತು, ನಾನು ಗೌರಮ್ಮನಿಗೆ ಆರೋಪಿತರು ಗಲಾಟೆ ಮಾಡಿ ಹೊಡೆದಿದ್ದನ್ನು

ನೋಡಿದ್ದೇನೆ , ಆಗ 1 ನೇ ಆರೋಪಿ ನೀವು ನಿಮ್ಮ ಮನೆಯದನ್ನು ನೋಡಿಕೊಳ್ಳಿ, ನಮ್ಮ ಮನೆಯ ಸಮಸ್ಯಗೆ ಬರಬೇಡಿ ಎಂದು ಹೇಳುತ್ತಿದ್ದ ಆ ನಂತರ ಆರೋಪಿಗಳು ಸಣ್ಣ ಪುಟ್ಟ ವಿಚಾರಕ್ಕೆ ಮೃತಳಿಗೆ ಹಿಂಸೆ ನೀಡುತ್ತಿದ್ದದ್ದರಿಂದ ಹಾಗೂ ಸಾಯಿ ಎಂದು ಪ್ರಚೋದಿಸುತ್ತಿದ್ದದ್ದರಿಂದ ಆಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ನಿಪಿ.12 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಆರೋಪಿಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.183/2022</u>

PW- 06

CW- 14

ಪ್ರ. ಬೋ. ದಿನಾಂಕಃ 28-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಓಬಳೇಶ್ |
| ತಂದೆ/ಗಂಡನ ಹೆಸರು | : | ಮೈಲಪ್ಪ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಶಾಘಲೆ ಗ್ರಾಮ, ದಾವಣಗೆರೆ ತಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತರು ನನಗೆ ಗೊತ್ತು. ಚಾಸಾ-1 ನನಗೆ ಗೊತ್ತು. ಮೃತ ಗೌರಮ್ಮ 1 ನೇ ಆರೋಪಿ ದೇವೇಂದ್ರಪ್ಪನ ಹೆಂಡತಿ. ಮೃತ ಗೌರಮ್ಮ 1 ನೇ ಆರೋಪಿಯ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ.

ಮೃತ ಗೌರಮ್ಮ ಯಾವ ಕಾರಣಕ್ಕೆ ನೇಣುಹಾಕಿಕೊಂಡಳು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಮತ್ತು ಗೌರಮ್ಮಳ ಮಗಳು ಕವಿತಾಳು ಹಣ ಮತ್ತು ಆಸ್ತಿ ಕೇಳಿ ಗಲಾಟೆ ಮಾಡುತ್ತಿದ್ದಳು. ತಾಯಿ ಮಗಳ ಜಗಳ ಎಂದು ನಾವು ಸುಮ್ಮನಿರುತ್ತಿದ್ದೇವು. ಆರೋಪಿತರ ಪ್ರಚೋದನೆಯಿಂದ ಗೌರಮ್ಮ ನೇಣುಹಾಕಿಕೊಂಡಿದ್ದಾಳೆ ನಾನು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

1 ನೇ ಆರೋಪಿಯ ಮನೆಯಲ್ಲಿ ಆರೋಪಿತರಿಗೂ ಮತ್ತು ಮೃತ ಗೌರಮ್ಮರಿಗೆ ಗಲಾಟೆಯಾಗುತ್ತಿತ್ತು, ನಾನು ಗೌರಮ್ಮನಿಗೆ ಆರೋಪಿತರು ಗಲಾಟೆ ಮಾಡಿ ಹೊಡೆದಿದ್ದನ್ನು ನೋಡಿದ್ದೇನೆ , ಆಗ 1 ನೇ ಆರೋಪಿ ನೀವು ನಿಮ್ಮ ಮನೆಯದನ್ನು ನೋಡಿಕೊಳ್ಳಿ, ನಮ್ಮ

ಮನೆಯ ಸಮಸ್ಯಗೆ ಬರಬೇಡಿ ಎಂದು ಹೇಳುತ್ತಿದ್ದ ಆ ನಂತರ ಆರೋಪಿಗಳು ಸಣ್ಣ ಪುಟ್ಟ ವಿಚಾರಕ್ಕೆ ಮೃತಳಿಗೆ ಹಿಂಸೆ ನೀಡುತ್ತಿದ್ದದ್ದರಿಂದ ಹಾಗೂ ಸಾಯಿ ಎಂದು ಪ್ರಚೋದಿಸುತ್ತಿದ್ದದ್ದರಿಂದ ಆಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ನಿಪಿ.11 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಆರೋಪಿಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 05

CW- 12

ಪ್ರ. ಬೋ. ದಿನಾಂಕಃ 28-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ರಾಜಪ್ಪ |
| ತಂದೆ/ಗಂಡನ ಹೆಸರು | : | ಜಯಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಶಾಘಲೆ ಗ್ರಾಮ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತರು ನನಗೆ ಗೊತ್ತು. ಚಾಸಾ-1 ನನಗೆ ಗೊತ್ತು. ಮೃತ ಗೌರಮ್ಮ 1 ನೇ ಆರೋಪಿ ದೇವೇಂದ್ರಪ್ಪನ ಹೆಂಡತಿ. ಮೃತ ಗೌರಮ್ಮ 1 ನೇ ಆರೋಪಿಯ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ.

ಮೃತ ಗೌರಮ್ಮ ಯಾವ ಕಾರಣಕ್ಕೆ ನೇಣುಹಾಕಿಕೊಂಡಳು ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಮತ್ತು ಗೌರಮ್ಮಳ ಮಗಳು ಕವಿತಾಳು ಹಣ ಮತ್ತು ಆಸ್ತಿ ಕೇಳಿ ಗಲಾಟೆ ಮಾಡುತ್ತಿದ್ದಳು. ತಾಯಿ ಮಗಳ ಜಗಳ ಎಂದು ನಾವು ಸುಮ್ಮನಿರುತ್ತಿದ್ದೇವು. ಸಾಕ್ಷಿ ನಿಪಿ.4 ರ ಫೋಟೋ ನೋಡಿ ಗುರುತಿಸಿರುತ್ತಾರೆ. ಆರೋಪಿತರ ಪ್ರಚೋದನೆಯಿಂದ ಗೌರಮ್ಮ ನೇಣುಹಾಕಿಕೊಂಡಿದ್ದಾಳೆ ನಾನು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

1 ನೇ ಆರೋಪಿಯ ಮನೆಯಲ್ಲಿ ಆರೋಪಿತರಿಗೂ ಮತ್ತು ಮೃತ ಗೌರಮ್ಮರಿಗೆ ಗಲಾಟೆಯಾಗುತ್ತಿತ್ತು, ನಾನು ಗೌರಮ್ಮನಿಗೆ ಆರೋಪಿತರು ಗಲಾಟೆ ಮಾಡಿ ಹೊಡೆದಿದ್ದನ್ನು

ನೋಡಿದ್ದೇನೆ , ಆಗ 1 ನೇ ಆರೋಪಿ ನೀವು ನಿಮ್ಮ ಮನೆಯದನ್ನು ನೋಡಿಕೊಳ್ಳಿ, ನಮ್ಮ ಮನೆಯ ಸಮಸ್ಯಗೆ ಬರಬೇಡಿ ಎಂದು ಹೇಳುತ್ತಿದ್ದ ಆ ನಂತರ ಆರೋಪಿಗಳು ಸಣ್ಣ ಪುಟ್ಟ ವಿಚಾರಕ್ಕೆ ಮೃತಳಿಗೆ ಹಿಂಸೆ ನೀಡುತ್ತಿದ್ದದ್ದರಿಂದ ಹಾಗೂ ಸಾಯಿ ಎಂದು ಪ್ರಚೋದಿಸುತ್ತಿದ್ದದ್ದರಿಂದ ಆಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ನಿಪಿ.10 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಆರೋಪಿಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 04

CW- 06

ಪ್ರ. ಬೋ. ದಿನಾಂಕಃ 28-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ದೇವಮ್ಮ |
| ತಂದೆ/ಗಂಡನ ಹೆಸರು | : | ರಾಮಪ್ಪ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಶಾಘಲೆ ಗ್ರಾಮ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತರು ನನಗೆ ಗೊತ್ತು. ಚಾಸಾ-1 ನನಗೆ ಗೊತ್ತು. ಮೃತ ಗೌರಮ್ಮ 1 ನೇ ಆರೋಪಿ ದೇವೇಂದ್ರಪ್ಪನ ಹೆಂಡತಿ. ಮೃತ ಗೌರಮ್ಮ 1 ನೇ ಆರೋಪಿಯ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ.

1 ನೇ ಆರೋಪಿ ಮತ್ತು ಗೌರಮ್ಮಳ ಮಗಳು ಕವಿತಾಳು ಹಣ ಕೇಳಿ ಗಲಾಟೆ ಮಾಡುತ್ತಿದ್ದಳು. ತಾಯಿ ಮಗಳ ಜಗಳ ಎಂದು ನಾವು ಸಮ್ಮನಿರುತ್ತಿದ್ದೇವು. ಮಗಳಿಗೆ ಆಸ್ತಿ ಕೊಡಲಿಲ್ಲ ಎಂದು ಗೌರಮ್ಮ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆರೋಪಿತರ ಪ್ರಚೋದನೆಯಿಂದ ಗೌರಮ್ಮ ನೇಣುಹಾಕಿಕೊಂಡಿದ್ದಾಳೆ ನಾನು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ಆರೋಪಿಗಳು ಸಣ್ಣ ಪುಟ್ಟ ವಿಚಾರಕ್ಕೆ ಮೃತಳಿಗೆ ಹಿಂಸೆ ನೀಡುತ್ತಿದ್ದದ್ದರಿಂದ ಹಾಗೂ ಸಾಯಿ ಎಂದು ಪ್ರಚೋದಿಸುತ್ತಿದ್ದದ್ದರಿಂದ ಆಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ

ಎಂದು ಗೊತ್ತಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ನಿಪಿ.9 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಆರೋಪಿಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 03

CW- 05

ಪ್ರ. ಬೋ. ದಿನಾಂಕಃ 28-12-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮಲ್ಲಪ್ಪ |
| ತಂದೆ/ಗಂಡನ ಹೆಸರು | : | ರಾಮಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಶಾಘಲೆ ಗ್ರಾಮ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಆರೋಪಿತರು ನನಗೆ ಗೊತ್ತು. ಚಾಸಾ-1 ನನಗೆ ಗೊತ್ತು. ಮೃತ ಗೌರಮ್ಮ 1 ನೇ ಆರೋಪಿ ದೇವೇಂದ್ರಪ್ಪನ ಹೆಂಡತಿ. ಮೃತ ಗೌರಮ್ಮ 1 ನೇ ಆರೋಪಿಯ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ. ಅದೇ ದಿನ ನಾನು ವಿಚಾರ ತಿಳಿದು , 1 ನೇ ಆರೋಪಿಯ ಮನೆಗೆ ಹೋಗಿ ನೋಡಿದ್ದೇನೆ. ಅವಳು ಸೀರೆಯಲ್ಲಿ ಮನೆಯಲ್ಲಿ ನೇಣು ಹಾಕಿಕೊಂಡು ಮೃತಪಟ್ಟಿದ್ದಳು.

1 ನೇ ಆರೋಪಿಯ ಮನೆಯಲ್ಲಿ ಗೌರಮ್ಮನಿಗೆ ಅವಳ ಮಗಳು ಕವಿತಾ ಜಮೀನು ಕೊಡಿ ಎಂದು ಕೇಳುತ್ತಿದ್ದಳು. ತಾಯಿ ಮಗಳ ಜಗಳ ಎಂದು ನಾವು ಸುಮ್ಮನಿರುತ್ತಿದ್ದೇವು. ಮಗಳಿಗೆ ಆಸ್ತಿ ಕೊಡಲಿಲ್ಲ ಎಂದು ಗೌರಮ್ಮ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆರೋಪಿತರ ಪ್ರಚೋದನೆಯಿಂದ ಗೌರಮ್ಮ ನೇಣುಹಾಕಿಕೊಂಡಿದ್ದಾಳೆ ನಾನು ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ಆರೋಪಿಗಳು ಸಣ್ಣ ಪುಟ್ಟ ವಿಚಾರಕ್ಕೆ ಮೃತಳಿಗೆ ಹಿಂಸೆ ನೀಡುತ್ತಿದ್ದದ್ದರಿಂದ ಹಾಗೂ

ಸಾಯಿ ಎಂದು ಪ್ರಚೋದಿಸುತ್ತಿದ್ದದ್ದರಿಂದ ಆಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ನಿಪಿ.8 ರಂತೆ ಹೇಳಿಕೆ ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಆರೋಪಿಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 02

CW- 03

ಪ್ರ. ಬೋ. ದಿನಾಂಕಃ 14-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಅಂಜಿನಮ್ಮ |
| ತಂದೆ/ಗಂಡನ ಹೆಸರು | : | ಮಂಜಪ್ಪ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಲೋಕಿಕೆರೆ ಗ್ರಾಮ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ದೊಡ್ಡಪ್ಪ. ಚಾಸಾ-2, 4 ರಿಂದ 8 ನನಗೆ ಗೊತ್ತು. ನನ್ನ ದೊಡ್ಡಪ್ಪ ಚಾಸಾ-1 ರವರಿಗೆ ಐದು ಜನ ಮಕ್ಕಳು. ಅವರಿಗೆ ಮೂರು ಗಂಡು ಮಕ್ಕಳು. ಇಬ್ಬರು ಹೆಣ್ಣುಮಕ್ಕಳು. ಅವರಲ್ಲಿ ಮೃತ ಗೌರಮ್ಮ ನನ್ನ 3 ನೇ ಮಗಳು.

ಮೃತ ಗೌರಮಳನ್ನು ಸುಮಾರು 15 ವರ್ಷಗಳ ಹಿಂದೆ 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಉಳಿದ ಆರೋಪಿತರು 1 ನೇ ಆರೋಪಿಯ ತಮ್ಮ, ತಮ್ಮನ ಹೆಂಡತಿ ಮತ್ತು ತಂಗಿ ಆಗಿರುತ್ತಾರೆ.

ಮದುವೆಯಾದ ನಂತರ ಗೌರಮ್ಮ 1 ನೇ ಆರೋಪಿಯ ಜೊತೆ ಶಾಘಲೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದಳು. ಉಳಿದ ಆರೋಪಿತರು 1 ನೇ ಆರೋಪಿಯ ಪಕ್ಕದ ಮನೆಯಲ್ಲಿ ವಾಸ ಮಾಡುತ್ತಿದ್ದರು.

ಮೃತ ಗೌರಮ್ಮ ನೇಣು ಹಾಕಿಕೊಂಡ ವಿಚಾರವನ್ನು ಪ್ರಕಾಶ್ ಎನ್ನುವವರು ತಿಳಿಸಿದ್ದರು. ವಿಷಯವನ್ನು ತಿಳಿದು , ಶಾಘಲೆಗೆ ಹೋಗಿ , ಮೃತ ದೇಹವನ್ನು ನೋಡಿದ್ದೇನೆ. ನಾನು ನೋಡಿದಾಗ ಮೃತಳ ಗಂಟಲು ದಪ್ಪ ಆಗಿತ್ತು, ಕಿವಿಯಲ್ಲಿ ರಕ್ತ ಬರುತ್ತಿತ್ತು. ಆಕೆ ಯಾವ ಕಾರಣಕ್ಕೆ ನೇಣುಹಾಕಿಕೊಂಡಿದ್ದಾಳೆ ನನಗೆ ಗೊತ್ತಿಲ. ಆದರೆ ಅವರ ಮಧ್ಯ ಸಣ್ಣಪುಟ್ಟ

ವಿಚಾರಕ್ಕೆ ಜಗಳ ಆಗುತ್ತಿದ್ದು, ಆದರೆ ಯಾಕೆ ಎಂದು ನನಗೆ ಗೊತ್ತಿಲ್ಲ. ಮೃತಳ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಾಗಿಲ್ಲ.

ಪೊಲೀಸರು ಸ್ಥಳಕ್ಕೆ ಬಂದು ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿ ಶವ ತನಿಖಾ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.2 ಪಂಚನಾಮೆ ಮತ್ತು ನಿಪಿ.3 ಕಚ್ಚಾ ನಕ್ಷೆ ನೋಡಿಗುರುತಿಸಿರುತ್ತಾರೆ. ಹಾಗೂ ನಿಪಿ.4 ಮತ್ತು 5 ರ ಫೋಟೋ ನೋಡಿ ಗುರುಸಿರುತ್ತಾರೆ. ಪಂಚನಾಮೆ ಸಮಯದಲ್ಲಿ ಪೊಲೀಸರು ವಶಪಡಿಕೊಂಡ ಸೀರೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ಆರೋಪಿಗಳು ಸಣ್ಣ ಪುಟ್ಟ ವಿಚಾರಕ್ಕೆ ಮೃತಳಿಗೆ ಹಿಂಸೆ ನೀಡುತ್ತಿದ್ದದ್ದರಿಂದ ಹಾಗೂ ಸಾಯಿ ಎಂದು ಪ್ರಚೋದಿಸುತ್ತಿದ್ದದ್ದರಿಂದ ಆಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ಗೊತ್ತಾಯಿತು. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಶ್ರೀ ಎಸ್ ಎಂ ಹೆಚ್ ವಕೀಲರು ಹಿರಿಯ ವಕೀಲರಾದ ಶ್ರೀ ಆರ್ ಕೆ ವಕೀಲರಿಗೆ ಕಣ್ಣಿನ ಶ್ರಸ್ತ ಚಿಕಿತ್ಸೆ ಆಗಿದೆ ಎಂದು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಾಕ್ಷಿಗೆ 80 ವರ್ಷ ವಸಯಸ್ಸಾಗಿರುವುದರಿಂದ ಮನವಿಯನ್ನು ತಿರಸ್ಕರಿಸಿ, ಪಾಟೀಸವಾಲು ಇಲ್ಲ ಎಂದು ತೆಗೆದುಕೊಳಳಲಾಯಿತು.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.183/2022

PW- 01
CW- 01
ಪ್ರ. ಬೋ. ದಿನಾಂಕಃ 14-09-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ರುದ್ರಪ್ಪ |
| ತಂದೆ/ಗಂಡನ ಹೆಸರು | : | ಕರೆ ಹನುಮಪ್ಪ |
| ವಯಸ್ಸು | : | 80 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕಂದಗಲ್ಲು, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಐದು ಜನ ಮಕ್ಕಳು. ಅವರಲ್ಲಿ ಮೃತ ಗೌರಮ್ಮ ನನ್ನ 3 ನೇ ಮಗಳು. ನನ್ನ ಮಗಳನ್ನು ಸುಮಾರು 15 ವರ್ಷಗಳ ಹಿಂದೆ 1 ನೇ ಆರೋಪಿಗೆ ಕೊಟ್ಟು ಮದುವೆ ಮಾಡಿರುತ್ತೇವೆ. ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. 2 ರಿಂದ 4 ನೇ ಆರೋಪಿತರು ನನಗೆ ಗೊತ್ತು. 2 ನೇ ಆರೋಪಿ 1 ನೇ ಆರೋಪಿಯ ತಮ್ಮ, 3 ನೇ ಆರೋಪಿ 2 ನೇ ಆರೋಪಿಯ ಹೆಂಡತಿ. 4 ನೇ ಆರೋಪಿ 1 ನೇ ಆರೋಪಿಯ ತಂಗಿ .

ಮದುವೆಯಾದ ನಂತರ ನನ್ನ ಮಗಳು 1 ನೇ ಆರೋಪಿಯ ಜೊತೆ ಶಾಘಲೆ ಗ್ರಾಮದಲ್ಲಿ ಸಂಸಾರ ಮಾಡುತ್ತಿದ್ದಳು. 2 ರಿಂದ 4 ನೇ ಆರೋಪಿತರು 1 ನೇ ಆರೋಪಿಯ ಪಕ್ಕದ ಮನೆಯಲ್ಲಿ ವಾಸ ಮಾಡುತ್ತಿದ್ದರು. 1 ನೇ ಆರೋಪಿ ಗ್ರಾಮ ಸಹಾಯಕನಾಗಿ ಕೆಲಸ ಮಾಡುತ್ತಿದ್ದ.

ಮದುವೆಯಾದ ನಂತರ 1 ನೇ ಆರೋಪಿ ಮತ್ತು ಆತನ ಹೆಂಡತಿ ಐದಾರು ವರ್ಷ ಚನ್ನಾಗಿದ್ದರು. ಯಾವುದಾದರೂ ಒಂದು ಕಾರಣ ಹುಡುಕಿಕೊಂಡು , ಆ ವಿಚಾರವಾಗಿ ನನ್ನ ಮೃತ ಮಗಳ ಜೊತೆ ಸಣ್ಣ ಪುಟ್ಟ ವಿಚಾರಕ್ಕೆ ಜಗಳ ಮಾಡುತ್ತಿದ್ದರು. ನಾನು ಆಗಾಗ ನನ್ನ

ಮಗಳ ಮನೆಗೆ ಹೋಗುತ್ತಿದ್ಧೆ ಆಗ ಆಕೆ ಈ ರೀತಿ ಕಾಟ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಳು.

ಈ ಬಗ್ಗೆ ನಾನು 1 ನೇ ಆರೋಪಿಗೆ ನ್ಯಾಯ ಮಾಡಬೇಡಿ, ಚನ್ನಾಗಿರ ಇರಿ ಎಂದು ಬುದ್ದಿವಾದ ಹೇಳಿದ್ದೆ. ಆ ರೀತಿ ಬುದ್ದಿವಾದ ಹೇಳಿದರೂ ಸಹ ಸ್ವಲ್ಪ ದಿನ ಸುಮ್ಮನಿರುತ್ತಿದ್ದ ಆ ನಂತರ 1 ನೇ ಆರೋಪಿ ಅದೇ ರೀತಿ ನನ್ನ ಮಗಳಿಗೆ ತೊಂದರೆ ಕೊಡುತ್ತಿದ್ದ. 2 ರಿಂದ 4 ನೇ ಆರೋಪಿತರು ಪಕ್ಕದ ಮನೆಯವರಾಗಿದ್ದರಿಂದ ಅವರೂ ಸಹ ನನ್ನ ಮಗಳಿಗೆ ಸಣ್ಣ ಪುಟ್ಟ ವಿಚಾರಗಳಿಗೆ ಕಾಟ ಕೊಡುತ್ತಿದ್ದರು.

ಆಕೆ ಸಾಯುವ ನಾಲ್ಕೈದು ದಿನ ಮೊದಲು ನನ್ನ ಮಗಳು ನನ್ನ ಮನೆಗೆ ಬಂದಿದ್ದಳು. ನಾನು ಇರಮ್ಮ ಎಂದು ಹೇಳಿದ್ದೆ, ಅವಳು ಬೈಯುತ್ತಾರೆ ಎಂದು ಹೇಳಿ ತನ್ನ ಮನೆಗೆ ಹೋದಳು. ಅದಾದ ಮೂರ್ನಾಲ್ಕು ದಿನಗಳ ನಂತರ ಶಾಘಲೆ ಪ್ರಕಾಶ ಎನ್ನುವವನು ನನ್ನ ಮೊಮ್ಮಗ ಅಂಜನಪ್ಪನಿಗೆ - ನನ್ನ ಮಗಳು ಉರುಳು ಹಾಕಿಕೊಂಡು ಮೃತಪಟ್ಟಿದ್ದಾಳೆ ಎಂದು ತಿಳಿಸಿ , ನನ್ನ ಮೊಮ್ಮಗ ಆ ವಿಚಾರ ನನಗೆ ತಿಳಿಸಿದ. ವಿಚಾರ ತಿಳಿದು ನಾವು ಶಾಘಲೆಗೆ ಹೋಗಿ ನೋಡಿದಾಗ ಹೆಣ ಕೆಳಗಡೆ ಇತ್ತು, ಮಂಚದ ಮೇಲೆ ಶವವನ್ನು ಇಟ್ಟು ಪೂಜೆ ಮಾಡಿದ್ದರು. ಹದಡಿ ಪೊಲೀಸರು ಬಂದು ವಿಚಾರಣೆ ಮಾಡಿ , ಪರಿಶೀಲಿಸಿ , ಉರುಳು ಹಾಕಿಕೊಳ್ಳಲು ಉಪಯೋಗಿಸಿದ ಸೀರೆಯನ್ನು ಮಹಜರ್ ಗೆ ಬೇಕು ಎಂದು ತೆಗೆದುಕೊಂಡುಹೋದರು. ನಾನು ಹೇಳಿದಂತೆ ನನ್ನ ಮೊಮ್ಮಗನ ಕಡೆಯಿಂದ ದೂರನ್ನು ಬರೆಸಿ ಪೊಲೀಸರಿಗೆ ನೀಡಿದ್ದೇನೆ. ಆ ರೀತಿ ಪೊಲೀಸರು ಬಂದಾಗ ಆಂಜಿನಪ್ಪ , ಮಂಜಪ್ಪ , ಅಂಜಿನಪ್ಪ ಮತ್ತು ನಾನು ಇದ್ದೇವು. ಪೊಲೀಸರು ಬಂದಾಗ ಮಹಜರ್ ಮಾಡಿ, ಫೋಟೋ ತೆಗೆಸಿ , ನಕ್ಷೆ ತಯಾರಿಸಿರುತ್ತಾರೆ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ದೂರನ್ನು ನಿಪಿ.1 ಎಂದು ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ.2 ಎಂದು ಗುರುತಿಸಲಾಯಿತು. ಸಾಕ್ಷಿ ನಕಾಶೆಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಸಾಕ್ಷಿ ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು

ವಶಪಡಿಸಿಕೊಂಡಿದ್ದ ಸೀರೆಯನ್ನು ನೋಡುತ್ತಿದ್ದು , ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

ನನ್ನ ಮಗಳ ಸಾವಿಗೆ ಆರೋಪಿತರೇ ಕಾರಣರಾಗಿರುತ್ತಾರೆ. ಆರೋಪಿಗಳು ನನ್ನ ಮಗಳಿಗೆ ವಿಷ ಕುಡಿದು ಸಾಯಿ ಎಂದು ಹೇಳುತ್ತಿದ್ದರು. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ತನ್ನ ಮಗಳು ಮತ್ತು 1 ನೇ ಆರೋಪಿ ಇರುವ ಅವರ ಮಗಳ ಮದುವೆಯ ಒಂದು ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಆರೋಪಿತರ ಪರ ಶ್ರೀ ಆರ್ ಕೆ ವಕೀಲರಿಂದ.

ಶ್ರೀ ಎಸ್ ಎಂ ಹೆಚ್ ವಕೀಲರು ಹಿರಿಯ ವಕೀಲರಾದ ಶ್ರೀ ಆರ್ ಕೆ ವಕೀಲರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಿದೆ ಎಂದು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಸಾಕ್ಷಿಗೆ 80 ವರ್ಷ ವಸಯಸ್ಸಾಗಿರುವುದರಿಂದ ಮನವಿಯನ್ನು ತಿರಸ್ಕರಿಸಿ , ಪಾಟೀಸವಾಲು ಇಲ್ಲ ಎಂದು ತೆಗೆದುಕೊಳಳಲಾಯಿತು.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.